STARTED QUESTIONS

(to which oral answers were given)

Financial Assistance to the Temples in D. K. District

147 A RAMACHANDRA Sullya).—Will the Minister of State for Marketing and Muzarai be pleased to state,—

(a) whether the Scheduled Castes people have performed prayers (poojas) in the temples in connection with Gandhi Jayanthi on 2nd October; whether it is a fact that the Government had given amount for the function ;

(b) if so the quantum of amount given and the temples to which the amount has been given in the State .

(c) the amount paid to each of the temple specially in Dakshina Kannada District ?

SRI SUDHEENDRA RAO KASBE (Minister of State for Marketing and Muzarai.—

(a) Yes. The Scheduled Castes people had performed prayers (poojas) in the temples on 2-10-1981. Government has not given any financial assistance in this behalf.

(b) Does not arise.

(c) Does not arise

ಶ್ರೀ ಎ. ರಾಮಚಂದ್ರ.— ಸ್ವಾಮಿ, ಕಳೆದ ಅಕ್ಟೋಬರ್ ಎರಡರಂದು ಗಾಂಧಿ ಜಯಂತಿ ಪ್ರಯುಕ್ತ ಹರಿಜನರು ದೇವಸ್ಥಾನಗಳಲ್ಲಿ ಪೂಜೆ ಸಲ್ಲಿಸಿರುವರೇ ಮತ್ತು ಊಟದ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದ್ದರೆ ಎಂದು ಪ್ರಶ್ನೆ ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ 'ಹೌದು' ಎಂದು ಒಂದು ಕಡೆ ಹೇಳಿದ್ದಾರೆ. ಮತ್ತೊಂದು ಕಡೆ 'ಇಲ್ಲ' ಎಂದು ಉತ್ತರ ಹೇಳಿದ್ದಾರೆ. ಇದರಲ್ಲಿ ಯಾವುದು ಸರಿಯಾಗಿದೆ.

ಶ್ರೀ ಸುದೀಂದ್ರರಾವ್ ಕಸಬೆ.— ಮಾನ್ಯ ಅಧ್ಯಕ್ಷರೇ, ಅಕ್ಟೋಬರ್ ಎರಡರಂದು ಗಾಂಧಿ ಜಯಂತಿಯ ದಿವಸ ಅಂದರೆ ದೇವಸ್ಥಾನಗಳಲ್ಲಿ ಧರ್ಮದರ್ಶಿಗಳ ಹಣದಲ್ಲಿ ಸುಮಾರು ೨೦೦ ರೂಪಾಯಿ ಗಳನ್ನು ಖರ್ಚು ಮಾಡಿ ಹರಿಜನರಿಂದ ಪೂಜೆಯನ್ನು ಮಾಡಿಸಬೇಕೆಂದು ಒಂದು ಸರ್ಕ್ಯೂಲರ್ ಮಾತ್ರ ಹೊರಡಿಸಿದ್ದೇವೆ. ಆದರೆ ಅದಕ್ಕೆ ಸರ್ಕಾರದ ಋಣವನ್ನು ಕೊಟ್ಟಿಲ್ಲ.

ಶ್ರೀ ಎ. ರಾಮಚಂದ್ರ.— ಮಾನ್ಯ ಅಧ್ಯಕ್ಷರೇ, ಸರ್ಕಾರದವರು ಈ ಒಂದು ಕಾರ್ಯಕ್ರಮಕ್ಕೆ ಧನ ಸಹಾಯವನ್ನು ಕೊಡದಿದ್ದರೆ ನಡೆಸುವುದಕ್ಕಾಗುವುದಿಲ್ಲ ಎಂದು ನನ್ನ ಗಮನಕ್ಕೆ ಬಂದಿದೆ. ಇದು ನಿಜವೇ.

ಶ್ರೀ ಸುದೀಂದ್ರರಾವ್ ಕಸಬೆ.— ಮಾನ್ಯ ಅಧ್ಯಕ್ಷರೇ, ದರ್ಮದರ್ಶಿಗಳ ಹಣದಲ್ಲಿ ಸುಮಾರು ೨೦೦ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಊಟ ಹಾಕಿಸಬೇಕು ಎಂದು ಸರ್ಕಾರದವರು ಪ್ರತ್ಯೇಕವಾಗಿ ಯಾವ ಸರ್ಕ್ಯೂಲರ್ ಕೂಡ ಕೊಟ್ಟಿಲ್ಲ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ತಿಳಿಸಿದ್ದಾರೆ. ಧರ್ಮದರ್ಶಿ ಗಳ ಹಣದಲ್ಲಿ ಸುಮಾರು ೨೦೦ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ ಎಂದು. ಆದರೆ ಸರ್ಕಾರ

ದವರು ಒಂದು ದೇವಸ್ಥಾನಕ್ಕೆ ಇಷ್ಟೇ ಹಣವನ್ನು ಖರ್ಚು ಮಾಡಬೇಕು ಎಂದು ನಿಗದಿ ಏನಾದರೂ ಮಾಡಿದ್ದಾರೋ ಆ ರೀತಿ ಏನಾದರೂ ನಿಗದಿ ಮಾಡಿದ್ದರೆ ರಾಜ್ಯದಲ್ಲಿರುವ ಎಲ್ಲಾ ದೇವಸ್ಥಾನಗಳಿಗೂ ಎಷ್ಟು ಹಣವನ್ನು ಖರ್ಚು ಮಾಡಿದ್ದಾರೆ ?

ಶ್ರೀ ಸುದೀಂದ್ರರಾವ್ ಕಸಬೆ —ಮಾನ್ಯ ಅಧ್ಯಕ್ಷರೇ, ಇಷ್ಟೇ ಹಣವನ್ನು ಖರ್ಚು ಮಾಡಬೇಕೆಂದು ಸರ್ಕಾರ ಯಾವ ನಿಗದಿಯನ್ನು ಸಹ ಮಾಡಿಲ್ಲ. ಆದರೆ ಸರ್ಕಾರದವರು ಹೇಳಿರುವುದು ಏನೆಂದರೆ ಸಣ್ಣ ಪ್ರಮಾಣದಲ್ಲಿ ಪೂಜೆಯನ್ನು ಮಾಡಿಸಬೇಕೆಂದು ಮಾತ್ರ ಹೇಳಿದ್ದೇವೆ.

ಶ್ರೀ ಪಿ. ರಾಮಭಟ್.— ದಿನಾಂಕ ೨ನೇ ಅಕ್ಟೋಬರ್ ೧೯೮೧ರಂದು ಯಾವ ಯಾವ ದೇವಸ್ಥಾನಗಳಲ್ಲಿ ಎಷ್ಟೆಷ್ಟು ಹಣ ಖರ್ಚು ಮಾಡಿದ್ದಿರಿ ಎನ್ನುವ ಬಗ್ಗೆ ಮಾಹಿತಿ ಏನಾದರೂ ತರಿಸಿದ್ದೀರಾ ಅಥವಾ ಇಷ್ಟೇ ದೇವಸ್ಥಾನಗಳಲ್ಲಿ ಪೂಜೆ ಮಾಡಬೇಕೆಂದು ಸೂಚನೆ ಏನಾದರೂ ಕೊಟ್ಟಿದ್ದೀರಾ.

ಶ್ರೀ ಸುದೀಂದ್ರರಾವ್ ಕಸಬೆ. ಮಾನ್ಯ ಅಧ್ಯಕ್ಷರೇ, ಸಣ್ಣ ಪ್ರಮಾಣದ ಪೂಜೆಯನ್ನು ಕೈಗೊಳ್ಳಬೇಕೆಂದು ಮಾತ್ರ ನಾವು ಹೇಳಿದ್ದೇವೆ. ಆದರೆ ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಉತ್ತರ ಬೇಕಾದರೆ ಪ್ರತ್ಯೇಕವಾದ ಪ್ರಶ್ನೆಯನ್ನು ಕೇಳಿದರೆ ಮಾತ್ರ ನಾನು ಉತ್ತರ ಕೊಡುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ.— ದಿನಾಂಕ ೨ನೇ ಅಕ್ಟೋಬರ್ ೧೯೮೧ರಂದು ಗಾಂಧಿ ಜಯಂತಿಯ ದಿವಸ ಹರಿಜನರಿಂದ ಪೂಜೆಯನ್ನು ಮಾಡಿಸಿದ್ದು ನಿಜವೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ ಆದರೆ ಹರಿಜನರ ಕೈಯಲ್ಲಿಯೇ ಏತಕ್ಕೆ ಆ ದಿವಸ ಪೂಜೆಯನ್ನು ಮಾಡಿಸಿದ್ದಾರೆ ಮತ್ತು ಮಹಾತ್ಮ ಗಾಂಧೀಜಿಯವರು ನಮ್ಮ ದೇಶಕ್ಕೆ ಅಪಾರ ಸೇವೆಯನ್ನು ಸಲ್ಲಿಸಿದ್ದಾರೆ. ಆದರೆ ಆ ದಿವಸ ಹರಿಜನರಿಂದಲೇ ಏತಕ್ಕೆ ಪೂಜೆಯನ್ನು ಮಾಡಿಸಿದ್ದೀರಿ.

ಶ್ರೀ ಸುದೀಂದ್ರರಾವ್ ಕಸಬೆ — ಮಾನ್ಯ ಅಧ್ಯಕ್ಷರೇ, ದಿನಾಂಕ ೨-೧೦-೧೯೮೧ ರಂದು ಹರಿಜನರಿಂದ ಪೂಜೆಯನ್ನು ಮಾಡಿಸುವುದಕ್ಕೆ ಸರ್ಕಾರದ ಹಣ ಏನೂ ಕೊಟ್ಟಿಲ್ಲ ಮಹಾತ್ಮ ಗಾಂಧೀಜಿಯವರು ಈ ದೇಶಕ್ಕೆ ಹೆಚ್ಚಿನ ಸೇವೆಯನ್ನು ಸಲ್ಲಿಸಿದ್ದಾರೆಂಬ ಉದ್ದೇಶದಿಂದ ಆ ದಿವಸ ಸರ್ಕಾರ ಈ ಕಾರ್ಯಕ್ರಮವನ್ನು ತಗೆದುಕೊಂಡಿದೆ.

ಶ್ರೀ ಬಿ. ಬಸವಲಿಂಗಪ್ಪ — ಮಾನ್ಯ ಮಂತ್ರಿಗಳು ನಾನು ಕೇಳಿದ ಪ್ರಶ್ನೆಗೆ ಉತ್ತರ ಹೇಳಲಿಲ್ಲ. ನಾನು ಕೇಳಿದ ಪ್ರಶ್ನೆಯೇ ಒಂದು, ಮಾನ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದೆ ಬೇರೆ.

ಶ್ರೀ ವೈ. ರಾಮಕೃಷ್ಣ.— ಗಾಂಧೀಜಿಯವರು ಹರಿಜನರಿಗೆ ಬಹಳ ಹತ್ತಿರ ಆಗಿದ್ದರು. ಅವರನ್ನು ಬಹಳ ಪ್ರೀತಿಸುತ್ತಿದ್ದರು. ಬಹುಶಃ ಅವರ ಆತ್ಮಕ್ಕೆ ಶಾಂತಿ ಸಿಗಲೆಂದು ಈ ಪೂಜೆಯ ವ್ಯವಸ್ಥೆಯನ್ನು ಶ್ರೀ ಕಸಬೆಯವರು ಅವರ ಕೈಯಲ್ಲಿ ಮಾಡಿಸಿರಬೇಕೆಂದು ನಾನು ಅಂದುಕೊಂಡಿದ್ದೇನೆ.

ಶ್ರೀ ಬಿ. ಬಸವಲಿಂಗಪ್ಪ — ಹರಿಜನರು ಯಾರು, ಹರಜನರು ಯಾರು ಇದ್ದರು ಸ್ವಾಮಿ ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇದು ಅವಮಾನ ಮಾಡತಕ್ಕಂಥ ಕೆಲಸ. ಮಹಾತ್ಮ ಗಾಂಧೀಜಿಯವರು ದೇಶಕ್ಕೆ ಸೇವೆ ಸಲ್ಲಿಸಿದ್ದಾರೆ ಎಂದು ಅವರಿಗೆ ನಾವು ಭಕ್ತಿ ತೋರಿಸೋಣ, ಸಭೆಗಳನ್ನು ಮಾಡೋಣ. ಆದರೆ ದೇವಸ್ಥಾನಗಳಲ್ಲಿ ಗುಡಿ-ಗುಂಡಾರಗಳಲ್ಲಿ ಇಂತಹ ಪೂಜೆಯ ವ್ಯವಸ್ಥೆ ಮಾಡಿರತಕ್ಕಂತಾದ್ದು ಅತಿರೇಕವಾದದ್ದು, ಸಂವಿಧಾನಕ್ಕೆ ವಿರುದ್ಧವಾಗಿದೆ. ಪೂಜೆ ಮಾಡುವುದಾದರೆ ಎಲ್ಲರೂ ಸೇರಿಕೊಂಡು ಮಾಡಲಿ. ಪ್ರತ್ಯೇಕವಾಗಿ ಹರಿಜನರನ್ನು ಕಟ್ಟಿಕೊಂಡು ಪೂಜೆ ಮಾಡಿಸುವುದು ನಿಷಿದ್ಧ. ಇನ್ನು ಮುಂದಕ್ಕಾದರೂ ಇಂಥಹ ಕೆಲಸ ಮಾಡಬಾರದೆಂದು ನಾನು ಹೇಳುತ್ತೇನೆ.

ಶ್ರೀ ಸುದೀಂದ್ರರಾವ್ ಕಸಬೆ.— ಹಾಗೆ ಮಾಡುವುದು ಸರ್ಕಾರದ ಅಭಿಪ್ರಾಯ ಅಲ್ಲ ಕೆಲವು ಹಳ್ಳಿಗಳಲ್ಲಿ ಇನ್ನೂ ಕೂಡ ಹರಿಜನರು ದೇವಸ್ಥಾನಗಳಿಗೆ ಹೋಗಬಾರದೆನ್ನುವ ಸಂಪ್ರದಾಯ ಇದೆ. ಅವರೂ ಕೂಡ ದೇವಸ್ಥಾನಗಳಿಗೆ ಹೋಗತಕ್ಕಂಥ ಸಂಪ್ರದಾಯ ಬೆಳೆಯಬೇಕೆಂದು ಮತ್ತು ಎಲ್ಲರೂ ಒಂದೇ ಎನ್ನತಕ್ಕಂಥ ಭಾವನೆ ಬರಲಿ ಎನ್ನುವ ದೃಷ್ಟಿಯಿಂದ ಈ ಕಾರ್ಯಕ್ರಮವನ್ನು ಹಾಕಿಕೊಂಡಿದ್ದು ಇದೆ.

ಶ್ರೀ ಎ. ರಾಮಚಂದ್ರ.— ಮಹಾತ್ಮ ಗಾಂಧೀಜಿಯವರ ಆತ್ಮಕ್ಕೆ ಸ್ವಲ್ಪ ಶಾಂತಿ ಸಿಗಲೆಂಬ ಉದ್ದೇಶದಿಂದ ಇದನ್ನು ಮಾಡಿದ್ದೀರಿ ಎಂದು ಹೇಳಿದಿರಿ. ಬಹುಶಃ ನಾನು ತಿಳಿದಹಾಗೆ ಗಾಂಧೀಜಿ

ಯವರು ಒಂದು ದಿವಸವೂ ದೇವಸ್ಥಾನಗಳಲ್ಲಿ ಪೂಜೆ ಮಾಡಿದವರಲ್ಲ. ತಾವು ಸ್ವತಃ ಕುಳಿತುಕೊಂಡು ತಪಸ್ಸು ಮಾಡಿ, ಧ್ಯಾನ ಮಾಡಿ ಪರಮಾತ್ಮನನ್ನು ಒಲಿಸಿಕೊಳ್ಳುತ್ತಿದ್ದರು. ಆದರೆ ದೇವಸ್ಥಾನದ ಬಾಗಿಲಿಗೂ ಹೋಗಿರಲಿಲ್ಲ. ಹರಿಜನರನ್ನು ಗಾಂಧೀಜಿಯವರು ತಮ್ಮ ಜೀವಮಾನದಲ್ಲೇ ದೇವಸ್ಥಾನಗಳಿಗೆ ಕರೆದುಕೊಂಡು ಹೋಗಿರಲಿಲ್ಲ. ತಾವು ಮಾತ್ರ ಏಕೆ ಹೀಗೆ ಮಾಡಿದ್ದೀರಿ ಎಂದು ನಾನು ಕೇಳಬೇಕಾಗಿದೆ.

ಶ್ರೀ ಸುದೀಂದ್ರರಾವ್ ಕಸಭೆ.— ಗಾಂಧೀಜಿಯವರು ಪ್ರತಿನಿತ್ಯ ರಾಮಮಂದಿರಕ್ಕೆ ಹೋಗುತ್ತಿದ್ದರು ಮತ್ತು ರಾಮಧ್ಯಾನ ಮಾಡುತ್ತಿದ್ದರು.

Imports of pulp by the Mysore Paper Mills

403 SRI G. BASAVANNAPPA (Holehonnur).—Will the Chief Minister be pleased to state.

(a) whether it is a fact that Mysore Paper Mills is going to import pulp for the manufacture of 75,000 tons of News Print per year in its expansion programmes ;

(b) if so, the cost of the pulp to be imported ;

(c) whether it is possible to reduce the quantity of pulp to be imported by Mysore Paper Mills by resorting to alternatives ?

SRI R. GUNDU RAO (Chief Minister).—

(a) Yes.

(b) As the cost of the imported pulp varies almost every quarter. the actual cost cannot be indicated. However, it will be generally higher than the cost of similar pulp made in the mill.

(c) Yes.

ಶ್ರೀ ಜಿ. ಬಸವಣ್ಣಪ್ಪ.—ಸ್ವಾಮಿ, ಭದ್ರಾವತಿಯ ಮೈಸೂರು ಪೇಪರ್ ಮಿಲ್ಸ್‌ನಲ್ಲಿ ೭೫ ಸಾವಿರ ಟನ್ ನ್ಯೂಸ್‌ಪ್ರಿಂಟ್ ಉತ್ಪಾದನೆ ಮಾಡುವ ಯೋಜನೆ ಇದೆ. ಇದನ್ನು ಮಾಡಬೇಕಾದರೆ ಇದಕ್ಕೆ ಎಷ್ಟು ಪ್ರಮಾಣದ ಪಲ್ಪ್ ಬೇಕಾಗುತ್ತದೆ ಮತ್ತು ಅದರ ವೆಚ್ಚವೆಷ್ಟು ?

SRI M. VEERAPPAMOILY.—The total requirement of bamboo and wood would be 125,000 tonnes for the newsprint project and 120,000 tonnes for the old mill per annum i. e. for the writing and printing project.

ಶ್ರೀ ಜಿ. ಬಸವಣ್ಣಪ್ಪ.—ವಿದೇಶಗಳಿಂದ ಆಮದು ಮಾಡಿಕೊಳ್ಳುವ ಇಂಪೋರ್ಟೆಡ್ ಪಲ್ಪ್ ಮೇಲೆ ನಾವು ಅವಲಂಬಿಸಿದ್ದೇ ಆದರೆ, ಪೂರೈಕೆಯಲ್ಲಿ ಹೆಚ್ಚು ಕಡಿಮೆಯಾದ ಪಕ್ಷದಲ್ಲಿ ಈ ಮಿಲ್ಲ್‌ನ್ನು ಕ್ಲೋಸ್ ಮಾಡುವ ಪರಿಸ್ಥಿತಿ ಉದ್ಭವವಾಗುವುದಿಲ್ಲವೇ ? ಆಗ ಸರ್ಕಾರ ಏನು ಆಸ್ಥೆ ವಹಿಸುತ್ತದೆ ?

ಶ್ರೀ ಎಂ ವೀರಪ್ಪ ಮೊಯಿಲಿ.—ಈಗಾಗಲೇ ನಾವು ರಾ-ಮೆಟೀರಿಯಲ್ಸ್ ಒದಗಿಸಲಿಕ್ಕಾಗಿ ಮತ್ತು ಆಮದು ಮಾಡತಕ್ಕಂಥ ಅಂಶವನ್ನು ತತ್‌ಕ್ಷಣ ಕಡಿಮೆ ಮಾಡುವುದಕ್ಕೋಸ್ಕರವಾಗಿ ಅನೇಕ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದರಲ್ಲಿ ಪ್ರಮುಖವಾಗಿ ಅಲ್ಲಿ ಒಂದು ಸಕ್ಕರೆ ಕಾರ್ಖಾನೆಯನ್ನು ಸ್ಥಾಪನೆ ಮಾಡಬೇಕಾಗಿದೆ. ಇದನ್ನು ಮಾಡಿದರೆ ಬಗಾಸ್ ಉತ್ಪಾದನೆಯಾಗುತ್ತದೆ, ಆದನ್ನು ಒಜ್ಜ್ ಪೇಪರ್ ಮಿಲ್‌ಗಳಿಗೆ ಉಪಯೋಗಿಸಿಕೊಳ್ಳಲು ಬರುತ್ತದೆ. ಆದರಿಂದಾಗಿ ಶೇಕಡಾ ೪೦ ರಷ್ಟು ಅವಶ್ಯಕತೆಯನ್ನು ಕಾಗದ ಕಾರ್ಖಾನೆ ವಿಷಯದಲ್ಲಿ ಪೂರೈಸಿಕೊಳ್ಳಲು ಸಾಧ್ಯವಾಗುತ್ತದೆ ಈ ಬಗೆ ನಾವು ಎಲ್ಲಾ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಇನ್ನು ಉಳಿದ ರಾ-ಮೆಟೀರಿಯಲ್ಸ್‌ನ್ನು ಆಫಾರ್